1909ನೆ ಇಸವಿಯ IIನೆ ನಂಬರ್ ರೆಗ್ಯುಲೇಷನ್.

1909ನೆ ಇಸವಿ ಜನವರಿ 11ನೆ ತಾರೀಖಿನಲ್ಲಿ ಶ್ರೀಮನ್ ಮೈಸೂರು ಮಹಾರಾಜಾ ಸಾಹೇಬ್ಬರವರ ಮಂಜೂರಾತಿಯನ್ನು ಹೊಂದಿರುತ್ತದೆ.

1903ನೆ ಇಸವಿಯ ಮೈಸೂರು ನಗರಾಭಿವೃದ್ಧಿ ರೆಗ್ಯುಲೇಷನನ್ನು ಪುನಃ ತಿದ್ದುಪಡಿ ಮಾಡುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.

1903ನೆ ಇಸವಿಯ ಮೈಸೂರು ನಗರಾಭಿವೃದ್ಧಿ ರೆಗ್ಯುಲೇಷನನ್ನು ಪುನಃ ತಿದ್ದುಪಡಿ ಮಾಡಬೇಕಾದುದು ಯುಕ್ತವಾಗಿರುವದರಿಂದ, ಶ್ರೀಮನ್ ಮಹಾರಾಜಾ ಸಾಹೇಬ್ಬರವರು ಇದರಡಿ ಕಂಡಂತೆ ವಿಧಿಸಲು ಅಪ್ಪಣೆ ದಯಪಾಲಿಸಿರುತ್ತಾರೆ :—

ಪೀಠಿಕೆ.

1871ನೆ ಇಸವಿಯ ರೆಗ್ಯುಲೇಷನುಗಳಿಗೆ ಬದಲಾಗಿ 1906ನೆ ಇಸವಿಯ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿಗೆ ದಾಖಲೆ ಕೊಡುವುದು.

1. 1871ನೆ ಇಸವಿಯ ಮ್ಯುನಿಸಿಪಲ್ ರೆಗ್ಯುಲೇಷನುಗಳಿಗೆ ಬದಲಾಗಿ 1906ನೆ ಇಸವಿಯ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿಗೆ ದಾಖಲೆ ಕೊಡತಕ್ಕದ್ದು.

"ಮ್ಯುನಿಸಿಪಲ್ ಕಮಿಷನ್" ವಗೈರೆಗೆ ಬದಲಾಗಿ "ಮ್ಯುನಿಸಿಪಲ್ ಕೌನ್ಸಿಲ್" ವಗೈರೆ ಎಂದು ಓದಿಕೊಳ್ಳತಕ್ಕದ್ದು.

2. 4, 5, 7, 16, 19, 21, 24, 26, 30, 31, 33, 37, ಮತ್ತು 38ನೆ ಪ್ರಕರಣಗಳಲ್ಲಿ ಇರುವ "ಮ್ಯುನಿಸಿಪಲ್ ಕಮಿಷನ್," "ಮ್ಯುನಿಸಿಪಲ್ ಕಮಿಷನರ್" ಮತ್ತು "ಮ್ಯುನಿಸಿಪಲ್ ಕಮಿಷನರುಗಳು" ಎಂಬ ಪದಗಳಿಗೆ ಬದಲಾಗಿ "ಮ್ಯುನಿಸಿಪಲ್ ಕೌನ್ಸಿಲ್" "ಮ್ಯುನಿಸಿಪಲ್ ಕೌನ್ಸಿಲರ್" ಮತ್ತು "ಮ್ಯುನಿಸಿಪಲ್ ಕೌನ್ಸಿಲರುಗಳು" ಎಂಬ ಪದಗಳನ್ನು ಓದಿಕೊಳ್ಳತಕ್ಕದ್ದು.

4ನೆ ಪ್ರಕರಣದ ತಿದ್ದುಪಾಟು.

3. ಜೋರ್ಡಿನ ವಿವರಣೆಯನ್ನು ವಿವರಿಸಿ ಹೇಳುವ 4ನೆ ಪ್ರಕರಣದಲ್ಲಿ "ಎಂಟು" ಎಂಬ ಪದಕ್ಕೆ ಬದಲಾಗಿ "ಬಂಭತ್ತು" ಎಂಬ ಪದವನ್ನೂ, "ಮೈಸೂರು ಡಿಸ್ಟ್ರಿಕ್ಟಿನ ತಹಶೀಲದಲ್ಲಿರುವ ಸಿವಿಲ್ ಸರ್ಜನ್" ಎಂಬ ಪದಗಳಿಗೆ ಬದಲಾಗಿ "ಮೈಸೂರು ಸಿಟಿ ಮ್ಯುನಿಸಿಪಾಲಿಟಿಯ ಹೆಲ್ತ್ ಆಫೀಸರು; ಸರ್ಕಾರದ ಡೆಪ್ಯುಟಿ ಸ್ಯಾನಿಟೆರಿ ಕಮಿಷನರವರು" ಎಂಬ ಪದಗಳನ್ನು ಉಪಯೋಗಿಸತಕ್ಕದ್ದು.

20ನೆ ಪ್ರಕರಣಕ್ಕೆ ಬದಲಾಗಿ ಹೊಸ ಪ್ರಕರಣವನ್ನು ಸೇರಿಸುವುದು.

4. 20ನೆ ಪ್ರಕರಣಕ್ಕೆ ಬದಲಾಗಿ ಇದರಡಿ ಕಂಡುದನ್ನು ಸೇರಿಸತಕ್ಕದ್ದು.

ಬೀದಿಗಳು, ಚರಂಡಿಗಳು, ಪಾಯಿಖಾನೆಗಳು, ಬಚ್ಚಲುಗಳು ವಗೈರೆಗಳ ವಿಷಯದಲ್ಲಿಯೂ, ನೋಟೀಸುಗಳನ್ನು ಜಾರಿಮಾಡುವದು ವಗೈರೆ ವಿಷಯದಲ್ಲಿಯೂ, ಕೆಲವು ಕಾಮಗಾರಿಗಳನ್ನು ಮಾಡಿಸಿ ಲಾಗವಡು ವಸೂಲ್ಮಾಡುವ ವಿಷಯದಲ್ಲಿಯೂ ಮ್ಯುನಿಸಿಪಲ್ ಕೌನ್ಸಿಲರುಗಳು ಚಲಾಯಿಸುತ್ತಿರುವ ಕೆಲವು ಅಧಿಕಾರಗಳನ್ನು ಜೋರ್ಡಿನವರು ಚಲಾಯಿಸುವುದು.

"20. 1906ನೆ ವರುಷದ VIIನೆ ನಂಬರ್ ಮ್ಯುನಿಸಿಪಲ್ ರೆಗ್ಯುಲೇಷನಿನಲ್ಲಿ ಬೀದಿಗಳ ವಿಚಾರವಾಗಿ 41, 50, 90ರಿಂದ 93, 113, 116, 118, 119, ಮತ್ತು 121ರಿಂದ 125ರ ವರಗಿನ ಪ್ರಕರಣಗಳಲ್ಲಿ ಮಾಡಿರುವ ನಿಯಮಗಳು; ಚರಂಡಿಗಳು, ಪಾಯಿಖಾನೆಗಳು, ಬಚ್ಚಲುಗಳು ವಗೈರೆ ವಿಷಯವಾಗಿ 99ರಿಂದ 105, 107 (1), 108, 109, 111, ಮತ್ತು 112ನೆ ಪ್ರಕರಣಗಳಲ್ಲಿ ಮಾಡಿರುವ ನಿಯಮಗಳೂ; ನೋಟೀಸು ಜಾರಿ ವಗೈರೆ ವಿಷಯವಾಗಿ 154ನೆ ಪ್ರಕರಣದಲ್ಲಿ ಮಾಡಿರುವ ನಿಯಮಗಳೂ; ಮತ್ತು ಮನೆ ಮಾಲೀಕರು ಅಥವಾ ವಾಸಸ್ಥರು ಯಾವ್ಯಾವ ಕೆಲಸವನ್ನು ಮಾಡದೆ ತಪ್ಪುತ್ತಾರೆಯೋ ಅಂಥಾ ಕೆಲಸವನ್ನು ಮಾಡಿಸಿ ಅದಕ್ಕಾಗಿ ತಗಲಿದ ಖರ್ಚನ್ನು ವಸೂಲ್ಮಾಡುವ ವಿಷಯವಾಗಿ 156ನೆ ಪ್ರಕರಣದಲ್ಲಿ ಮಾಡಿರುವ ನಿಯಮಗಳೂ, ಈ ರೆಗ್ಯುಲೇಷನಿನ ಅಭಿಪ್ರಾಯಕ್ಕೆ ಅನುಗುಣವಾಗಿರುವ ಮಟ್ಟಿಗೆ,

(a) ಈ ರೆಗ್ಯುಲೇಷನಿನ ಪ್ರಕಾರ ಜೋರ್ಡಿನ ಎಖಾತ್ಯರಿಗೆ ಕೊಟ್ಟಿರುವ ಬೀದಿಗಳಿಗಾಗಲಿ, ಚರಂಡಿಗಳಿಗಾಗಲಿ, ಪಾಯಿಖಾನೆಗಳಿಗಾಗಲಿ, ಬಚ್ಚಲು ವಗೈರೆಗಳಿಗಾಗಲಿ ಅಥವಾ ಅವುಗಳ ಭಾಗಗಳಿಗಾಗಲಿ, ಮತ್ತು

(b) ಈ ರೆಗ್ಯುಲೇಷನಿನ ಪ್ರಕಾರ ಜೋರ್ಡಿನವರು ನೋಟೀಸುಗಳನ್ನು ಜಾರಿಮಾಡುವುದಕ್ಕಾಗಲೀ, ಕೆಲಸಗಳನ್ನು ನಡೆಸುವದಕ್ಕಾಗಲಿ, ಅವುಗಳ ಖರ್ಚನ್ನು ವಸೂಲ್ಮಾಡುವದಕ್ಕಾಗಿ—

ಅನ್ವಯಿಸತಕ್ಕದ್ದು; ಮತ್ತು ಸದರೀ ನಿಯಮಗಳಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳು ಅಥವಾ ಇತರ ಮ್ಯುನಿಸಿಪಲ್ ಅಧಿಕಾರಿಗಳು ಎಂದು ಇರುವ ಸ್ಥಳದಲ್ಲಿ "ಜೋರ್ಡಿನ್" ಎಂದು ಅನ್ವಯಿಸಿಕೊಳ್ಳತಕ್ಕದ್ದು.

ತಾರೀಖು 20ನೆ ಜನವರಿ 1909, ಇಸ್ತಿಹಾರ್ನಾಮೆ ನಂ. ಜೆ. 4196—ಜೆ. ಎಂ. 229-08-1.

1906ನೆ ಇಸವಿ ಆಗಸ್ಟು 20ನೆ ಮತ್ತು ಜೆ. 1456ನೆ ನಂಬರ್ ಇಸ್ತಿಹಾರ್ನಾಮೆಯ IIನೆ ಪ್ಯಾರಾದಲ್ಲಿ ಶ್ರೀಮನ್ ಮಹಾರಾಜರವರ ಮಂತ್ರಾಲೋಚನಾ ಸಭೆಯಲ್ಲಿ ಕೆಲಸ ನಡೆಸತಕ್ಕ ಬಗ್ಗೆ ವಿಧಿಸೋಣವಾಗಿರುವ ನಿಬಂಧನೆಗಳ ಪೈಕಿ 12 (1)ನೆ ನಿಬಂಧನೆಯಲ್ಲಿ—

"ಗವರ್ನಮೆಂಟಿಗೆ ಬರುವ ಅಪೀಲುಗಳು" ಎಂಬ ಮಾತುಗಳಿಗೆ ಬದಲಾಗಿ "ಗವರ್ನಮೆಂಟಿಗೆ ಬರುವ ಅಪೀಲುಗಳೂ ಮತ್ತು ಅದೇ ಕೋಡಿನ 210 A ಪ್ರಕರಣದ ಮೇರೆಗೆ ರವಿನ್ಯೂ ಕಮಿಷನರವರಿಂದ ವಾಪಸ್ ತರಿಸಿಕೊಳ್ಳಲ್ಪಡುವ ಅಪೀಲುಗಳು" ಎಂಬ ಮಾತುಗಳನ್ನು ಸೇರಿಸತಕ್ಕದ್ದು

ಎಂದು ಶ್ರೀಮನ್ ಮಹಾರಾಜಾ ಸಾಹೇಬ್ಬರವರು ಅಪ್ಪಣೆ ದಯಪಾಲಿಸಿರುತ್ತಾರೆ.

ವಿ. ಪಿ. ಮಾಧವರಾವ್,
ದಿವಾನರವರು.